## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ**: School of Nursing, Church of South Indian Hospital, Bengaluru ಈ ಸಂಸ್ಥೆಯನ್ನು Board of Nursing Education of Nurses League of Christian Association of India (C.M.A.I) ಯಿಂದ KSDNEB ಗೆ ವರ್ಗಾಯಿಸುವ ಬಗ್ಗೆ

**ಓದಲಾಗಿದೆ**:
(1) ರಿಜಿಸ್ಟ್ರಾರ್, ಕೆಎನ್‌ಸಿ, ಬೆಂಗಳೂರು ಇವರ ಏಕಕಡತ ಸಂಖ್ಯೆ: KSNC-EST0INST/1/2023-THE NURSE REGISTRAR
(2) ದಿನಾಂಕ: 27.10.2023ರ ಉನ್ನತಾಧಿಕಾರಿ ಸಮಿತಿ ಸಭೆಯ ನಡವಳಿಗಳು

**ಪ್ರಸ್ತಾವನೆ**:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ರಿಜಿಸ್ಟ್ರಾರ್, ಕೆಎನ್‌ಸಿ ಇವರ ಏಕಕಡತದಲ್ಲಿ School of Nursing, Church of South Indian Hospital, Bengaluru ರವರು Board of Nursing Education of Nurses League of Christian Association of India (C.M.A.I) ಇದರ ವ್ಯಾಪ್ತಿಗೆ ಒಳಪಟ್ಟಿದ್ದು, ಸದರಿ ಶಾಲೆಯನ್ನು Board of Nursing Education of Nurses League of Christian Association of India (C.M.A.I) ಇಂದ Karnataka State Diploma in Nursing Examination Board (KSDNEB) ಗೆ ವರ್ಗಾಯಿಸಲು ಸಂಸ್ಥೆಯು ಮನವಿ ಮಾಡಿರುವುದನ್ನು ನಿರ್ದೇಶನಾಲಯದ ವ್ಯಾಪ್ತಿಗೆ ಒಳಪಡುವ ಕರ್ನಾಟಕ ನರ್ಸಿಂಗ್ ಕೌನ್ಸಿಲ್ ನಿಂದ ತಪಾಸಣೆ ನಡೆಸಿ, ಸದರಿ ಸಂಸ್ಥೆಗೆ ಜಿ.ಎನ್.ಎಂ. ಕೋರ್ಸಿನಲ್ಲಿ 35 ಸೀಟುಗಳ ಪ್ರವೇಶಮಿತಿಯೊಂದಿಗೆ Board of Nursing Education of Nurses League of Christian Association of India (C.M.A.I) ಇಂದ Karnataka State Diploma in Nursing Examination Board (KSDNEB) ಗೆ ವರ್ಗಾಯಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, ದಿನಾಂಕ: 27.10.2023ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಉನ್ನತಾಧಿಕಾರ ಸಮಿತಿ ಸಭೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಶಿಫಾರಸ್ಸು ಮಾಡಿದ ಅನ್ವಯ Board of Nursing Education of Nurses League of Christian Association of India (C.M.A.I) ಇದರ ವ್ಯಾಪ್ತಿಗೆ ಒಳಪಟ್ಟಿದ್ದ School of Nursing, Church of South Indian Hospital, Bengaluru ಈ ಶಾಲೆಯನ್ನು Board of Nursing Education of Nurses League of Christian Association of India (C.M.A.I) ಇಂದ Karnataka State Diploma in Nursing Examination Board (KSDNEB) ಗೆ 2023-24ನೇ ಸಾಲಿನಿಂದ ಜಿ.ಎನ್.ಎಂ. ಕೋರ್ಸಿನಲ್ಲಿ 35 ಸೀಟುಗಳ ಪ್ರವೇಶಮಿತಿಯೊಂದಿಗೆ ವರ್ಗಾಯಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

Office of The Karnataka State Nursing Council K.S.N.C. Bangalore-9

**ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 417 ಎಂಎಂಸಿ 2021, ಬೆಂಗಳೂರು, ದಿನಾಂಕ: 30.10.2023**

3/11/2023

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, Board of Nursing Education of Nurses League of Christian Association of India (C.M.A.I) ಇದರ ವ್ಯಾಪ್ತಿಗೆ ಒಳಪಟ್ಟಿದ್ದ School of Nursing, Church of South Indian Hospital, Bengaluru ಈ ಶಾಲೆಯನ್ನು Board of Nursing Education of Nurses League of Christian Association of India (C.M.A.I) ಇಂದ Karnataka State Diploma in Nursing

Scanned with AnyScanner

Examination Board (KSDNEB) ಗೆ 2023-24ನೇ ಸಾಲಿನಿಂದ ಜಿ.ಎನ್.ಎಂ. ಕೋರ್ಸಿನಲ್ಲಿ 35 ಸೀಟುಗಳ ಪ್ರವೇಶಮಿತಿಯೊಂದಿಗೆ ವರ್ಗಾಯಿಸಿ, ಆದೇಶಿಸಿದೆ.

**ಷರತ್ತು ಮತ್ತು ನಿಬಂಧನೆಗಳು**

1) ಸದರಿ ಸಂಸ್ಥೆಯು ಅನುಬಂಧದಲ್ಲಿ ಮಂಜೂರಾಗಿರುವ ಸೀಟುಗಳ ಪೈಕಿ ಶೇ.10 ರಷ್ಟು ಸೀಟುಗಳನ್ನು ಸರ್ಕಾರಕ್ಕೆ ಹಂಚಿಕೆಗಾಗಿ ಬಿಟ್ಟುಕೊಡತಕ್ಕದ್ದು.
2) ಕರ್ನಾಟಕ ರಾಜ್ಯ ನರ್ಸಿಂಗ್ ಪರಿಷತ್‌ನ ಮಂಜೂರಾತಿಯನ್ನು ಪಡೆಯತಕ್ಕದ್ದು.
3) ಕರ್ನಾಟಕ ರಾಜ್ಯ ನರ್ಸಿಂಗ್ ಪರಿಷತ್ ಇವರು ನಿಗದಿಪಡಿಸಿರುವ ಪಠ್ಯಕ್ರಮ ಮತ್ತು ಮಿಡ್‌ವೈಫ್ ಹಾಗೂ ನರ್ಸಿಂಗ್ ಪರೀಕ್ಷಾ ಮಂಡಳಿಯ ಕಾರ್ಯ ಯೋಜನೆಯನ್ನು ಪಾಲಿಸತಕ್ಕದ್ದು.
4) ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತು ನಿಗದಿಪಡಿಸಿರುವ ಮೂಲಭೂತ ಸೌಲಭ್ಯಗಳನ್ನು ಹೊಂದತಕ್ಕದ್ದು.
5) ಸದರಿ ಶಾಲೆಯು ಮುಂದಿನ 05 ವರ್ಷಗಳ ಕಾಲಮಿತಿಯೊಳಗೆ ಸ್ವಂತ ಆಸ್ಪತ್ರೆ ಹಾಗೂ ಸ್ವಂತ ಕಟ್ಟಡವನ್ನು ಹೊಂದಿರತಕ್ಕದ್ದು.
6) ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತು ಮತ್ತು ರಾಜ್ಯ ಸರ್ಕಾರ ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
7) 2003 ರ ಕರ್ನಾಟಕ ಡಿಪ್ಲೊಮಾ ಇನ್ ಜನರಲ್ ನರ್ಸಿಂಗ್, ಮಿಡ್‌ವೈಫರಿ: ಸೈಕಿಯಾಟ್ರಿ ಕೋರ್ಸುಗಳ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿಯ ಪ್ರಕಾರ ಹಾಗೂ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಪ್ರವೇಶ ನಿಯಮಾವಳಿಯನ್ವಯ ನಿಗದಿಪಡಿಸಿರುವ ವಿದ್ಯಾರ್ಥಿಗಳ ಪ್ರವೇಶ ಪಡೆಯತಕ್ಕದ್ದು. ಯಾವುದೇ ಕಾರಣಕ್ಕೆ ಹೆಚ್ಚುವರಿ ವಿದ್ಯಾರ್ಥಿ ಪ್ರವೇಶ ಪಡೆಯತಕ್ಕದ್ದಲ್ಲ. ಇದನ್ನು ಉಲ್ಲಂಘಿಸಿದ್ದಲ್ಲಿ 1991 ರ ಕರ್ನಾಟಕ ಮಾನ್ಯತೆ ರಹಿತ ಮತ್ತು ಸಂಯೋಜಿತ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ, ಅಧಿನಿಯಮದಡಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.
8) ಅನುಬಂಧದಲ್ಲಿನ ಸಂಸ್ಥೆಗಳಿಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನ ರಹಿತ ಸಂಸ್ಥೆಯಾಗಿರುವ ಷರತ್ತಿಗೆ ಒಳಪಟ್ಟಿರುತ್ತದೆ.
9) ಮೇಲ್ಕಂಡ ಯಾವುದೇ ಷರತ್ತನ್ನು ಕಾಲೇಜು ಉಲ್ಲಂಘಿಸಿದಲ್ಲಿ, ಸದರಿ ಸಂಸ್ಥೆಗೆ ನೀಡಲಾಗಿರುವ ಮಂಜೂರಾತಿ/ಅನುಮತಿಯನ್ನು ಹಿಂತೆಗೆದುಕೊಳ್ಳಲಾಗುವುದು.
10) ಸರ್ಕಾರವು ಈ ದಿಸೆಯಲ್ಲಿ ಕಾಲಕಾಲಕ್ಕೆ ವಿಧಿಸಬಹುದಾದ ಇತರೆ ಷರತ್ತು ಮತ್ತು ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಶಿವಲಿಂಗಪ್ರಭು ವಾಲಿ)** 30/10/23
ಸರ್ಕಾರದ ಅಧೀನ ಕಾರ್ಯದರ್ಶಿ-2,
ವೈದ್ಯಕೀಯ ಶಿಕ್ಷಣ ಇಲಾಖೆ

**ಇವರಿಗೆ:**

1. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತು, ಬೆಂಗಳೂರು.
3. ಅಧ್ಯಕ್ಷರು / ಪ್ರಾಂಶುಪಾಲರು, School of Nursing, Church of South Indian Hospital, Bengaluru
4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ:**

1. ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.

Scanned with AnyScanner